2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮೆಂಜೂರ್ಮಾಡಲ್ಪಟ್ಟು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಪಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಪುನಃ ಹರಾಜ್ ಹಾಕಲ್ಪಡುವವು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪದೆ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡೆಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

6. ಡೆಪ್ಯುಟಿ ಕಮಿಷರ್ಯರವರಿಂದ ಮೆಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮುವಾದ್ದಾಗಿರುವದಿಲ್ಲವು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ಡೆಪ್ಯುಟಿ ಕಮಿಷನರವರು ಖಾಯಂಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯಪತ್ರವನ್ನು ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರು ಮಾಡೋಣಾದ ಬಂದು ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು ಸದರೀ ಹರಾಜಿನಿಂದ ನುಕ್ಸಾನಪಟ್ಟುಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿನಗಳೊಳಗಾಗಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

| ಡಿಸ್ಟ್ರಿಕ್ಟು | ತಾಲ್ಲೂಕು | ಹೋಬ್ಳಿ | ಗ್ರಾಮ. | ಜೋಡಿದಾರರ ಹೆಸರು | ಅಂದಾಜಾ ಬೀಜವರಿ | | ಅಂದಾಜು ಜಮೀನು ಯೋಗ್ಯತೆ ಜಿ. | ಸಾಲಿಯಾನಾ ಸರಕಾರಕ್ಕೆ ಕಿಸ್ತಿ ಕೊಡಬೇಕಾದ ಕಿಸ್ತಿ. | ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ. | ಹರಾಜು ತಾರೀಖು ಸ್ಥಳ. |
|---|---|---|---|---|---|---|---|---|---|---|
| | | | | | ಎ. | ಗು. | | | | |
| | | | | | | | ರೂ. ಆ. | ರೂ. | ರೂ. ಆ. ಪೈ. | |
| ಹಾಸನ | ಹೊಳೆನರಸೀಪುರ. | ಹೊಸ್ಕೊಪ್ಪಕಾವಲು. | ಕಪ್ಪನಗ್ರಾನು | ನಾರಾಯಣರಾವ್ ಸ್ವೀಕಂಪ್ಪ ಸುಬ್ಬರಾವ್, ಚಾಮಯ್ಯ ನರಸಿಂಗರಾವ್, ರಾಮಸ್ವಾಮಿ. | ಪರಂಪೋಕು | 58 21 | 479 8 | 193 | 764 6 1 | 1907ನೆ ಇಸವಿ ಸೆಪ್ಟೆಂಬರ್ 2ನೆ ತಾರೀಖು ಸೋಮವಾರ ಬೆ॥ 11 ಗಂಟೆ ಲಾ॥ ಹೊಳೆನರಸೀಪುರ ತಾಲ್ಲೂಕು ಕಛೇರಿಯಲ್ಲಿ ಹರಾಜು ಜನರಲ್ ಕಾಮನಾಗಿ ಹರಾಜು ನಡಿಸುವರು ಇತಿ ಅಸಿಸ್ಟಂಟ್ ಕಮಿಷನರು ಹರಾಜ್ ಮಾಸ್ಟರ್. |
| | | | | | ಖುಷ್ಕಿ ... | 577 22 | | | | |
| | | | | | ತರಿ ... | 45 27 | | | | |
| | | | | | ಬಾಗಾಯತು | 2 12 | | | | |
| | | | | | ಜುಮ್ಲಾ ... | 684 2 | | | | |

ಟಿ. ಧರ್ಮರಾಜು ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

## ಶಿವಮೊಗ್ಗ ಡಿಸ್ಟ್ರಿಕ್ಟು

## ಇಸ್ತಿಹಾರ್.

ತಾರೀಖು 21ನೆ ಜನವರಿ 1907.

ಮೈಸೂರು ಸೀಮೆಯ ಲೇಟ್ ಚೀಫ್ ಕಮಿಷನರವರಿಂದ ಕೊಡಲ್ಪಟ್ಟ ತಾರೀಖು 17—4—1867ನೆ ಪುಸ್ತಂ 6ನೆ ನಂಬರು ಭೂವಿಯಲ್ಲಿ ಹೂಳಲ್ಪಟ್ಟ ನಿಧಿಗಳ ಪತ್ತೆವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯುವಂತೆ ಪಡಿಸುವದೇನೆಂದರೆ—

ಶಿವಮೊಗ್ಗ ಡಿಸ್ಟ್ರಿಕ್ಟು ಶಿಕಾರಿಪುರದ ತಾಲ್ಲೂಕು ಹುಣಸೆಕೊಪ್ಪದ ಗ್ರಾಮದಲ್ಲಿ ಸರ್ಕಾರಿ ಜಾಗವಲ್ಲಿರುವ ಬಂಧು ಹುಣಸೆಮರದ ಬುಡದಲ್ಲಿ ಈ ಕೆಳಗೆ ನಮೂದಾಗಿರುವ ಸುಮಾರು 909 ರೂಪಾಯಿ 8 ಆಣೆ ಬೆಲೆ ಉಳ್ಳ ನಿಧಿಯು ತಾರೀಖು 16-9-06ರಲ್ಲಿ ಸಿಕ್ಕಿತು :—

| ಸಿಕ್ಕಿದ ವಸ್ತುವೆ. | ಅಂದಾಜಾ ಬೆಲೆ. ರೂ. ಆ. ಪೈ. |
|---|---|
| 38 ಚಿನ್ನದ ನಾಣ್ಯಗಳು ... | 388 0 0 |
| ಒಂದು ಭಂಗಾರದ ಸರಿಗೆ ... | 105 0 0 |
| ಒಂದು ಜೊತೆ ಬೆಳ್ಳಿ ಬಳೆ ... | 48 0 0 |
| ಎರಡು ಭಂಗಾರದ ಹೊನ್ನೂವು ... | 12 0 0 |
| ಡಿಟೋ ಡಿಟೋ ... | 9 0 0 |
| ಒಂದು ಚಿನ್ನದ ಕಠಡಿಗೆ ... | 264 0 0 |
| ಒಂದು ಡಿಟೋವಿನ ಭಂಗಾರದ ಪೆಟ್ಟಿಗೆ ... | 10 0 0 |
| ಒಂದು ಭಂಗಾರದ ಕಾವಂತಿಗೆ ಹುವ್ವು ... | 60 0 0 |
| ಒಂದು ಜೊತೆ ಕಾಕಿತಾಲಿಗುಂಡು ... | 6 0 0 |
| ಒಂದು ಜೊತೆ ಭಂಗಾರದ ಚಳತುಂಬು ... | 9 0 0 |
| ಒಂದು ಜೊತೆ ಭಂಗಾರದ ಕಪ್ಪ ... | 15 0 0 |
| ಒಂದು ಭಂಗಾರದ ಚಾಕ ... | 16 0 0 |
| ಒಂದು ಭಂಗಾರದ ವಾಲೆಕಲಕ ... | 16 0 0 |
| ಒಂದು ಭಂಗಾರದ ಖುಗುಡಿ ಕಲಕ ... | 1 8 0 |
| | 909 8 0 |

2. ಸದರಿ ವಿಸಿಪ್ಪ ನಿಧಿಗೇ ಆಗಲಿ ಅಥವಾ ಅದರ ಒಂದು ಭಾಗಕ್ಕಾಗಲಿ ಹಕ್ಕುದಾರರೆಲ್ಲರು ಅವರಿಗೆ ಇರತಕ್ಕ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕ ಖುದ್ದಾಗಿಯಾಗಲಿ, ವಿಜಂಟರ ಮುಖಾಲಕವಾಗಿಯಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷ್ಟರವರ ಆಫೀಸಿನಲ್ಲಿ 1907ನೆ ಇಸವಿ ಆಗಸ್ಟು 3ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಹಾಜರಾಗಬೇಕು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

---

## ಕಡೂರು ಡಿಸ್ಟ್ರಿಕ್ಟು.

## ಇಸ್ತಿಹಾರ್.

ತಾರೀಖು 31ನೆ ಜನವರಿ 1907.

ತರೀಕೆರೆ ತಾಲ್ಲೂಕು ಕೆಳಗಿನ ಶಿವಬೈಲ್ ಎಸ್ಟೇಟು ವಿ|| ಡೇವಿಡ್ ಹಿನ್ರಿ ಕೋರ್ಪಲೆಸ್ ಸಾಹೇಬರವರಿಂದ ತಿಗಡೆ ಗ್ರಾಮಕ್ಕೆ ಬರಬೇಕಾದ ಕಂದಾಯದ ಬಾಕ್ಕೀಗಾಗಿ ಇವರ ಸ್ಥಿರಸ್ವತ್ತನ್ನು ಕಡೂರು ಡಿಸ್ಟ್ರಿಕ್ಟು ತರೀಕರೆ ತಾಲ್ಲೂಕು ನಂದಿಬಟ್ಟು ಗ್ರಾಮದಲ್ಲಿ ಸನ್ 1907ನೆ ಇಸವಿ ಮಾರ್ಚಿ ತಾರೀಖು 11ನೆ ಸೋಮವಾರದ ದಿವಸ ತಾಲ್ಲೂಕು ಅಮಲ್ದಾರ್‌ರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂತ ಇದರಿಂದ ಪ್ರಸಿದ್ಧಪಡಿಸಿದೆ.

ಹೆಚ್ಚಿನ ತಪಸೀಲುಗಳಿಗೆ 1907ನೆ ಇಸವಿ ಫೆಬ್ರವರಿ 7ನೆ ತಾರೀಖು 6ನೆ ಸಂಖ್ಯೆಯ ಮೈಸೂರು ಗೆಜೆಟ್ಟಿನ IIನೆ ಭಾಗದ 45ನೆ ನಂಬರ್ ಪೇಜು ನೋಡಬೇಕು.

ಎಂ. ಲಕ್ಷ್ಮಣಾಸ್ತ್ರಿ,
ಫಾರ್ ಡೆಪ್ಯುಟಿ ಕಮಿಷನರ್.